



ದೋಖಲಾ ಪಾಸಿನ ಸ್ಥೂಪಗಳು



ಬೌದ್ಧ ವಿಹಾರದಲ್ಲಿ ಕಂಡ ಭೂತಾನದ ದೊರೆ, ರಾಣಿಯ ಚಿತ್ರಪಟ

ಭಿಕ್ಕುಗಳಲ್ಲಿ ಗೋಚರಿಸಲಿಲ್ಲ. ಅವರ ಸಹಜ ಬಾಳನ್ನು ಕಸಿದು ಅವರನ್ನು ಸನ್ಯಾಸಕ್ಕೆ ದೂಡಿರುವುದು ಸಮಾಜ ತಾನೇ? ಸನ್ಯಾಸಿಗಳು ಸ್ತ್ರೀಸಂಗ ಮಾಡಿದಾಗ ಲೋಕ ನಿಂದಿಸುತ್ತದೆ. ನಿಸರ್ಗಸಹಜವಲ್ಲದ ಬ್ರಹ್ಮಚರ್ಯವನ್ನು ಅವರ ಮೇಲೆ ಹೇರಿರುವುದರಲ್ಲೇ ದೋಷವಿದೆ ಎಂದು ಆಲೋಚಿಸುವುದಿಲ್ಲ.

ಸಂತ ಕುನ್ಲೆ ಅಸಹಜ ಬ್ರಹ್ಮಚರ್ಯದ ವಿರುದ್ಧ ಬಂಡೆದ್ದ ಗುರುವಿನಂತೆ ತೋರಿದನು. ಕುನ್ಲೆ ತನ್ನ ಜೀವಿತ ಕಾಲದಲ್ಲಿ ಮನೆಮನೆಗೆ ಹೋಗಿ ಮದ್ಯವನ್ನು (ಭೂತಾನಿ ಭಾಷೆಯಲ್ಲಿ 'ಅರ') ಕೇಳಿ ಪಡೆಯುತ್ತಿದ್ದನಂತೆ; ಮನಸ್ಸು ಬಂದರೆ ಆ ಮನೆಯ ಮಹಿಳೆಯರ ಭೋಗವನ್ನೂ ಕೇಳುತ್ತಿದ್ದನಂತೆ; ಜನ ಅದನ್ನು ಹಸಾದವೆಂದು ಸಂತೋಷದಿಂದ ಒಪ್ಪುತ್ತಿದ್ದರಂತೆ. ಕುನ್ಲೆಯ ಕಥೆಗಳು ನಮ್ಮ ಜೋಕುಮಾರಸ್ವಾಮಿ ಕಥೆಗಳಂತೆ ತೋರಿದವು. ಈತ ತಾಂತ್ರಿಕ ಯೋಗಿಯಾಗಿದ್ದು, ಭೂತಾನಿನ ಫಲವಂತಿಕೆಯ ದೈವವಾಗಿ ಮಾರ್ಪಟ್ಟದ್ದನೇ? ಸಮಕಾಲೀನ ಬೌದ್ಧಭಿಕ್ಷುಗಳ ಒಣಬೋಧೆಯನ್ನೋ ಅವರ ಬಾಲಸನ್ಯಾಸವನ್ನೋ ಟೀಕಿಸಲು ಹೀಗೆ ಮಾಡಿದನೇ? ಜಗತ್ತಿನ ಅತಿಹೆಚ್ಚು ಜನಸಂಖ್ಯೆ ಇರುವ ಎರಡು ದೇಶಗಳ ನಡುವಣ ಭೂತಾನದ ಜನಸಂಖ್ಯೆ ಎಂಟು ಲಕ್ಷ. ಭೂತಾನಿಗಳು ಬೇಕೆಂದೇ ಸಂತಾನ ಫಲವಂತಿಕೆಯ ಸಂತನನ್ನು ಸೃಷ್ಟಿಸಿಕೊಂಡರೇ? ಪಾಶ್ಚಿಮಾತ್ಯರು ಇಲ್ಲಿನ ಫಲವಂತಿಕೆ ಸಂಪ್ರದಾಯದ ಬಗ್ಗೆ ಪುಸ್ತಕ ಬರೆದಿದ್ದು, ಅದನ್ನು ಅಂಗಡಿಗಳಲ್ಲಿ ಇಡಲಾಗಿತ್ತು. ಟಿಬೆಟಿಯನ್ ಮಹಾಯಾನವು ತಾಂತ್ರಿಕ ಪಂಥ. ಅಲ್ಲಿ ಸ್ತ್ರೀಸಂಭೋಗವು ರೂಪಕವಾಗಿದೆ. ವಜ್ರಯಾನದಲ್ಲಿ ಹೇವಜ್ರ ವಿರೋಚನನು ಹೆಣ್ಣನ್ನು ಎಷ್ಟು ರಭಸದಿಂದ ಕೂಡಿದ್ದಾನೆಂದರೆ, ಸ್ತ್ರೀದೇಹವನ್ನು ಮೈಗೆ ಒದ್ದೆಬಟ್ಟೆ ಅಂಟಿಸಿಕೊಂಡಂತೆ ಸಂಲಗ್ನ ಮಾಡಿಕೊಂಡಿರುವನು. ಅಕ್ಕ ಹೇಳುವ 'ಬೆಚ್ಚರೆ ಬೆಸುಗೆ ಅರಿಯದಂತಿರಬೇಕು; ಅಪ್ಪಿದರೆ ಅಸ್ಥಿ ನುಗ್ಗುನುರಿಯಾಗಬೇಕು' ಎಂಬ ಆಲಿಂಗನವದು. ಇಂತಹ ಆಲಿಂಗನದ ಚಿತ್ರಗಳು ಕುಶಾಲನಗರ ಮುಂಡಗೋಡು ವಿಹಾರಗಳಲ್ಲಿ ಕಂಡಿದ್ದು ನೆನಪಾಯಿತು.

ಎಂಟು ಗಂಟೆಯಾಯಿತು. ಬೆಳಗಿನ ಎಳೆಬಿಸಿಲು ಬಲಿಯುತ್ತ ಕಟಾವು ಮುಗಿದ ಗದ್ದೆಗಳನ್ನು ಹೊನ್ನ ಬಯಲಾಗಿಸಿತ್ತು. ನಾವು ಬರುವುದು ತಡವಾಯಿತೆಂದು ಹುಡುಕಿಕೊಂಡು ಬಂದ ಸೋನಂ, ವಿಹಾರದ ಹೊರಗೆ ಕಾಯುತ್ತಿದ್ದನು. 'ನೀವೇನು ನೋಡಿದಿರಿ' ಎಂದು ಆತ ಕೇಳಿದನು. ನಾವು ಧ್ಯಾನಮಾಡಿ ತೀರ್ಥ ಸ್ವೀಕರಿಸಿದ್ದನ್ನು ಹೇಳಿದೆವು. ಆತನೆಂದ: 'ನೀವು ಲಾಮಾರ ವಿಶ್ವಾಸಗಳಿಸಿದ್ದರೆ ನೋಡುವುದು ಬಹಳಿತ್ತು. ಅಲ್ಲಿ ಇರುವ ಆಲ್ಬಂನಲ್ಲಿ ಸಂತಾನಕ್ಕಾಗಿ ಬಂದ ದಂಪತಿಗಳು, ಹರಕೆ ತೀರಿಸಲು ತಮ್ಮ ಮಕ್ಕಳನ್ನು ಎತ್ತಿಕೊಂಡು ಬಂದ ಚಿತ್ರಗಳಿದ್ದವು'. ನಾವು ಸೋನಂನನ್ನು ಬಿಟ್ಟು ಬಂದಿದ್ದಕ್ಕೆ ಪರಿತಪಿಸಿದೆವು. ಬಹುಶಃ, ಈ ವಿಹಾರದಲ್ಲಿ ನಿಯೋಗ ಪದ್ಧತಿಯಿದೆ. ಇದು ಎಲ್ಲ ದೇಶಗಳಲ್ಲೂ ಬೇರೆಬೇರೆ ರೂಪದಲ್ಲಿದೆ. ಪಾಂಡುರಾಜನ ಸತಿಯರಾದ ಮಾದ್ರಿ ಕುಂತಿ ಮಕ್ಕಳನ್ನು ಪಡೆದಿದ್ದು ಈ ಪದ್ಧತಿಯಲ್ಲಿ. ಭಾರತದಲ್ಲೂ ಅಲ್ಲಲ್ಲಿ ಈ ಪದ್ಧತಿಯಿದೆ. ತಮಿಳು ಲೇಖಕ ಪೆರುಮಾಳ್ ಮುರುಗನ್ ಇದನ್ನು ಕಾದಂಬರಿ ಬರೆದರು.

ಲಿಂಗಾರಾಧನೆಯ ನಾಡಿನಿಂದ ಹೋದವರಿಗೆ ನಮಗೆ ಲಬೋಸಾದ ಶಿಶ್ನಾರಾಧನೆ ಸೋಜಿಗ ಎನಿಸಲಿಲ್ಲ. ಆದರೆ ಭಾರತದ ಲಿಂಗಾರಾಧನೆ ಪ್ರಕೃತಿ ಪುರುಷಗಳೆರಡೂ ಸಮಾನ ನೆಲೆಯಲ್ಲಿ ಕೂಡಿದ್ದರ ಸಂಕೇತ. ಲಬೋಸಾದ್ದು ಪುರುಷತ್ವದ ಉರವಣಿಗೆ. ಹೆಣ್ಣಾಳಿಕೆಯ ಬುಡಕಟ್ಟು ಸಮಾಜದಿಂದ ಬೌದ್ಧಕ್ಕೆ ಹೊರಳಿದ ಬಳಿಕ ಪುರುಷತ್ವದ ಆರಾಧನೆ ಇಲ್ಲಿ ನೆಲೆಯೂರಿತೇ? ಟಿಬೆಟಿನ ರಾಣಿ ಪದ್ಮಸಂಭವನನ್ನು ಮೆಚ್ಚಿ ಪ್ರೇಮಿಸಿದಳು. ಅವಳನ್ನು ಹುಲಿಯಾಗಿ ಮಾಡಿ ಏರಿಕೊಂಡು ಸಂತನು ಚಲಿಸಿದನು. ಶಕ್ತಿಯ ಚಲನಶೀಲತೆ ಇಲ್ಲದೆ ಪುರುಷತ್ವಕ್ಕೆ ಬೆಲೆಯಿಲ್ಲ ಎಂಬರ್ಥದ ಕಥೆಗಳನ್ನು ಶಾಕ್ತ ಹೊಂದಿದೆ. ಆದರೆ ಹೆಣ್ಣನ್ನು ಸವಾರಿ ಮಾಡುವ ಗಂಡುಸಂತನ ಮೇಲರಿಮೆಯನ್ನು ಕುನ್ಲೆ ಕಥೆ ಸೂಚಿಸುತ್ತಿರಬಹುದು.

ಭೂತಾನದ ಒಂದು ಸಣ್ಣ ಹಳ್ಳಿ ನಮಗೆ ಅನಿರೀಕ್ಷಿತವಾಗಿ ಹೊಸ ಅನುಭವಕ್ಕೆ, ಹೊಸ ಚಿಂತನೆಗೆ ಪ್ರಚೋದಿಸಿತು. ಅಲ್ಲಿನ ಸಂಸ್ಕೃತಿಯಲ್ಲಿ ಇನ್ನೂ ಏನೆಲ್ಲ ನಿಗೂಢಗಳಿವೆಯೊ? ನಮ್ಮ ಪಕ್ಕದ ದೇಶಗಳ ಬಗ್ಗೆ ನಮಗೆ ಗೊತ್ತಿರುವುದಾದರೂ ಎಷ್ಟೊಂದು ಕಡಿಮೆ?

ಪ್ರತಿಕ್ರಿಯಿಸಿ: feedback@sudha.co.in